ನನಗಿರಲಿಲ್ಲವಾದ್ದರಿಂದ ಉತ್ತರಿಸಲಿಲ್ಲ. ಅದನ್ನು ಕೇಳಲಿಕ್ಕಾಗಿಯೇ ಸಿಕ್ಕಳೇ? ಯಾಕೋ ಈ ಒಂದು ಪ್ರಶ್ನೆ ನೇರವಾಗಿ ಬಂದು ನನಗೇ ಬಡಿದಂತಾಯಿತು. ಆದರೆ ನಿಜಕ್ಕೂ ನನಗೆ ಅವ್ಯಾವುದೂ ಗೊತ್ತಿರಲಿಲ್ಲ. ಮೂವತ್ತು ವರುಷಗಳ ಹಿಂದೆ ಸುಳಿವೇ ಕೊಡದೆ ಏಕಾಏಕಿ ತಾಯಿ ಮಗಳು ನಾಪತ್ತೆಯಾಗಿದ್ದು ಮಾತ್ರ ಗೊತ್ತಿತ್ತು. ಈಗಿದ್ದ ವಸ್ತು ಮರುಕ್ಷಣದಲ್ಲಿ ಇಲ್ಲವೆನ್ನುವ ಹಾಗೆ ಕಣ್ಮರೆಯಾಗಿದಷ್ಟೇ. ಆಗ ಇವಳಿಗಾಗಿ ನಾ ಹುಡುಕಿದ್ದೆನೇ ಗೊತ್ತಿಲ್ಲ.

ಆದರೆ ಇವೆಲ್ಲಾ ಅರ್ಥವಾಗಬೇಕಾದರೆ ಬಹುಶಃ ಮೂವತ್ತು ವರುಷ ಹಿಂದಕ್ಕೆ ನಾನು ಹೋಗಬೇಕೇನೋ? ರಾತ್ರೋ ರಾತ್ರಿ ತಾಯಿ ಮಗಳು ಊರು ಬಿಟ್ಟದ್ದು ಗೊತ್ತಿತ್ತು. ಗಂಟುಮೂಟೆ ಕಟ್ಟಿಕೊಂಡು ಬೆಂಗಳೂರಿನಲ್ಲಿರುವ ಶೇಷತ್ತೆಯ ಅಣ್ಣನ ಮನೆಗೆ ಹೋದರೆಂದು ಊರಲ್ಲಿ ಸಿಕ್ಕ ಕಡೆಯ ಸುದ್ದಿ. ಪಿಯುಸಿ ಪರೀಕ್ಷೆಗೆ ಇನ್ನೆರಡು ವಾರವಿತ್ತು. ಓದಿಕೊಳ್ಳಲು ಕಾಲೇಜಿಗೆ ರಜೆಯಿದ್ದ ಸಮಯ. 'ಸೆಂಡ್ ಆಫ್' ಪಾರ್ಟಿಯಲ್ಲಿ ಪಾರುಗೆ ಅವಮಾನವಾಗಿದೆಯೆಂದು ಗೊತ್ತಿದ್ದರೂ ಊರೇ ಬಿಟ್ಟು ಹೋಗಬಹುದೆಂದು ಎಣಿಸಿರಲಿಲ್ಲ, ಅದೂ ಪರೀಕ್ಷೆಗೆ ಕೇವಲ ಎರಡು ವಾರವಿರುವಾಗ ಹಾಗೆ ದಿಢೀರನೆ! ಯಾರು ಬೋರ್ಡ್ ಮೇಲೆ ಆ ರೀತಿ ಬರೆದಿದ್ದರೋ, ಅದು ಹೇಗೆ ಅಂದೇ ಎಲ್ಲರ ಮುಂದೆ ಅನಾವರಣಗೊಂಡಿತೋ ಒಂದೂ ಅರ್ಥವಾಗದ ವಿಷಯ. ಹಾಗೆ ಬೋರ್ಡ್ ಮೇಲೆ ಅಸಂಬದ್ಧವಾದದ್ದನ್ನು ಬರೆದವರು ಕಡೆಯಲ್ಲಿ ನನ್ನ ಹೆಸರನ್ನು ಏಕೆ ತಳುಕು ಹಾಕಿದ್ದರೋ?

